ಅಧ್ಯಕ್ಷರು.—ಮಾನ್ಯ ರಾಮಸ್ವಾಮಿಯವರು ಏನು ಹೇಳುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಾನು ಈ ಸದನಕ್ಕೆ ಒಂದು ಗಂಟೆ ಮುಂಚೆ ಬಂದು ನನ್ನ ಚೇಂಬರಿನಲ್ಲಿರುತ್ತೇನೆ. ಆಗ ಮಾನ್ಯ ಸದಸ್ಯರಲ್ಲಿ ಯಾರು ಬೇಕಾದರೂ ಬರಬಹುದು ಮತ್ತು ಇಂತಿಂತಹ ವಿಚಾರಗಳು ಬರಲಿಲ್ಲ ಉಳಿದಿವೆ ಎಂದರೆ ಇದರ ಬಗ್ಗೆ ರಿಕಾರ್ಡುಗಳನ್ನು ತರಿಸಿ ನೋಡಲು ನನಗೂ ಸಹಾಯವಾಗುತ್ತದೆ. ಆದರೆ ಆ ರೀತಿ ಒಬ್ಬ ಸದಸ್ಯರು ಅಲ್ಲಿಗೆ ಬರದೆ ಇಲ್ಲಿ ಹಠಾತ್ತನೆ ಎದ್ದುನಿಂತು ಹೇಳುವುದಾದರೆ ನಾನೇನು ಮಾಡಲು ಸಾಧ್ಯ ? ಇದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಶರಣಪ್ಪ.—ನಾನು ತುಂಗಭದ್ರಾ ಎಡದಂಡೆ ಕಾಲುವೆ ಬಗ್ಗೆ ತಮ್ಮ ಕಡೆಗೆ ಒಂದು ನೋಟೀಸನ್ನು ಕಳುಹಿಸಿದ್ದೆ. ಇದರ ಬಗ್ಗೆ ಸರಕಾರದ ವಿವರಗಳು ಇನ್ನೂ ಬರಲಿಲ್ಲ.

ಅಧ್ಯಕ್ಷರು.—ಇದನ್ನು ನೋಡುತ್ತೇನೆ.

Replies due to Questions etc.

ಶ್ರೀ ಎಚ್. ಡಿ. ದೇವೇಗೌಡ.—ನಾನು ಕಳೆದ ಎರಡು ಮೂರು ದಿನಗಳಿಂದಲೂ ನನ್ನ ಪ್ರಶ್ನೆಗಳ ಬಗ್ಗೆ ಇನ್ನೂ ಸರಕಾರ ಉತ್ತರ ತರಿಸಿಕೊಡಲಾಗಲಿಲ್ಲ. ನಾನು ಈ ಪ್ರಶ್ನೆಗಳನ್ನು ಕಳುಹಿಸಿ ಸುಮಾರು ಒಂಬತ್ತು ತಿಂಗಳಾದರೂ ಇದುವರೆಗೆ ಸರಕಾರ ಉತ್ತರ ಕೊಡುವ ಮನಸ್ಸು ಮಾಡಲಿಲ್ಲ. ಇವೆಲ್ಲಾ ಬಹು ಮುಖ್ಯವಾದ ಪ್ರಶ್ನೆಗಳು. ಬೆಂಗಳೂರು ವಾಟರು ಸಪ್ಲೇಜ್ ಬೋರ್ಡಿನ ಪ್ರಶ್ನೆ ಕಳುಹಿಸಿದ್ದೆ, ಉತ್ತರ ಬರಲಿಲ್ಲ ಕಂಬೈನ್ಡ್ ಬಿಲ್ಡಿಂಗುಗಳ ಬಗ್ಗೆ ಪ್ರಶ್ನೆ ಕಳಿಸಿದ್ದೆ, ಉತ್ತರ ಬರಲಿಲ್ಲ. ಹೇಮಾವತಿ ಯೋಜನೆ ಟೆಂಡರುಗಳ ಬಗ್ಗೆ ಪ್ರಶ್ನೆ ಕಳುಹಿಸಿದ್ದೆ, ಉತ್ತರ ಬರಲಿಲ್ಲ ಹೀಗೆ ಕೆಲವು ಪ್ರಮುಖವಾದಂತಹ ಪ್ರಶ್ನೆಗಳು ಎಂದರೆ ಬರಗಾಲದಲ್ಲಿ ಕೆಲವು ಕಡೆ ಮೆಷಿನರಿಗಳನ್ನು ತರಿಸಿರುವುದರ ಬಗ್ಗೆ ಪ್ರಶ್ನೆ ಕಳಿಸಿದ್ದೆ. ಇನ್ನು ಮೂರು ದಿನಗಳಲ್ಲಿ ನಮ್ಮ ಸದನದ ಕಾರ್ಯ ಕಲಾಪಗಳು ಮುಗಿಯುತ್ತವೆ. ಸಾಧ್ಯಾಶಃ ನಮ್ಮ ಸರ್ಕಾರಕ್ಕೆ ಇದನ್ನು ಬರುವ ಬಜೆಟ್ಟಿನ ಅಧಿವೇಶನದಲ್ಲಿ ತರಿಸಬೇಕೆಂದು ಇದ್ದಾರೋ ಏನೋ ಗೊತ್ತಿಲ್ಲ. ಇದರ ಬಗ್ಗೆ ನಾನೂ ಕೂಡ ಮತ್ತೆ ಮತ್ತೆ ಇಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ ಎಂದಿದ್ದೆ. ಆದರೂ ಇಲ್ಲಿ ಹೇಳಬೇಕಾಗಿ ಬಂತು. ಮತ್ತು ಇದನ್ನು ಮನಸ್ಸಿಲ್ಲದ ಮನಸ್ಸಿನಿಂದ ಹೇಳುತ್ತಿದ್ದೇನೆ.

Sri D. DEVARAJ URS.—Alright. I will see all these things are attended to.

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಕೂಡ ಈ ಮಂತ್ರಿ ಮಂಡಲದಲ್ಲಿ ನಾಲ್ಕೈದು ಜನರನ್ನು ಕೈಬಿಟ್ಟಿದ್ದರ ಬಗ್ಗೆ ಸರಕಾರದ ಹೇಳಿಕೆ ಬೇಕೆಂದು ಪ್ರಶ್ನೆ ಕಳುಹಿಸಿದ್ದೆ. ಇನ್ನೂ ಉತ್ತರ ಬರಲಿಲ್ಲ.

Reported speech of the C.M. at Bijapur

ಶ್ರೀ ಎಸ್. ಬಂಗಾರಪ್ಪ.—ನಾನು ರೂಲ್ 146 ಪ್ರಕಾರ ನನ್ನ ಒಂದು ನೋಟೀಸನ್ನು ರುಜು ಹಾಕಿ ಇತರ ಸದಸ್ಯರ ರುಜುವಿನೊಡನೆ ತಮಗೆ ಕಳುಹಿಸಿದ್ದೇನೆ. ಇವು ಮಾನ್ಯ ಮುಖ್ಯ ಮಂತ್ರಿಗಳು ಬಿಜಾಪುರದಲ್ಲಿ ಭಾಷಣ ಮಾಡಿದುದರ ಬಗ್ಗೆ.

ಶ್ರೀ ಡಿ. ದೇವರಾಜ ಅರಸ್.—ಇದು ಆಗಲೇ ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ಆಗಲೇ ಇಲ್ಲೂ ಹೇಳಿಯಾಗಿದೆ, ಆ ಸದನದಲ್ಲೂ ಹೇಳಿಯಾಗಿದೆ.

ಅಧ್ಯಕ್ಷರು.—ಇದರ ಬಗ್ಗೆ ಆಗಲೇ ಉತ್ತರ ಕೊಡಲಾಗಿದೆ. ಮತ್ತೆ ಇದರ ಬಗ್ಗೆ ಏಕೆ ಹೇಳುತ್ತೀರಿ ?

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಒಂದು ಸಾರಿಯಲ್ಲ. ಅದರ ಬಗ್ಗೆ ನಾಲ್ಕು ಸಾರಿ ಹೇಳಿಯಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ. —ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಹಾಗೂ ವಿರೋಧ ಪಕ್ಷದ ನಾಯಕರ ಇಬ್ಬರ ಹೇಳಿಕೆಯೂ ಇದೆ. ಇದು ಅವರಿಬ್ಬರ ಹೇಳಿಕೆಯಲ್ಲ. ಇದರ ಬಗ್ಗೆ ಸಭೆಯಲ್ಲ ಹೇಳಿಕೆ ಬಂದರೆ ಜನರಿಗೆ ಇದರ ಬಗ್ಗೆ ತಿಳಿಯುತ್ತದೆ. ಇದಕ್ಕಾಗಿ ನಾನೂ ಸೇರಿ ಆ ನೋಟೀಸನ್ನು ತಮ್ಮ ಕಡೆಗೆ ಕಳುಹಿಸಿದ್ದೇನೆ.

ಅಧ್ಯಕ್ಷರು. —ನಾನು ಇನ್ನೂ ನೋಟೀಸನ್ನೇ ನೋಡಿಲ್ಲ. ನನಗೆ ಇದಕ್ಕೆ ಗಮನ ಕೊಡಲು ಮಾನ್ಯ ಪುಟ್ಟಸ್ವಾಮಯ್ಯನವರು ಅವಕಾಶ ಕೊಡಬೇಡವೇ ?

ಶ್ರೀ ಎಸ್. ಬಂಗಾರಪ್ಪ. —ಇಂತಹ ಪ್ರಮುಖವಾದ ವಿಷಯಗಳನ್ನು ತರುವಾಗ ತಮಗೆ ಮನವರಿಕೆಯಾಗುವಂತೆ ಒಪ್ಪಿಸಬೇಕು. ಆ ನಂತರ ಇದನ್ನು ಕೇಳಿ ಒಪ್ಪಿಗೆ ಕೊಡುವುದು ಬಿಡುವುದು ತಮಗೆ ಸೇರಿದ್ದು. ಇದಕ್ಕಾಗಿ ಸ್ವಲ್ಪ ನಮ್ಮ ಸದಸ್ಯರು ಇಲ್ಲಿ ತಮ್ಮ ಗಮನವನ್ನು ಸೆಳೆಯುತ್ತಿರುವುದು.

ಶ್ರೀ ಬಿ. ಪುಟ್ಟಸ್ವಾಮಯ್ಯ. —ಮುಖ್ಯ ಮಂತ್ರಿಗಳು ರಾಜ್ಯದ ಮೊದಲನೆ ಪ್ರಜೆ. ಅವರಲ್ಲಿ ಲಂಚ ಹಾಗೂ ಸ್ವಜನ ಪಕ್ಷಪಾತ ಮಾಡಿದ್ದಾರೆಂದು ಯಾರೂ ಹೇಳಿಲ್ಲ. ಆದರೆ ಅವರ ಭಾಷಣದಲ್ಲಿ ಇವನ್ನು ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು. —ಅವರು ಮಾಡಿರುವ ಅಪರಾಧವಾದರೂ ಏನು ?

ಶ್ರೀ ಬಿ. ಪುಟ್ಟಸ್ವಾಮಯ್ಯ. —ಅಧ್ಯಕ್ಷರೇ, ನಮ್ಮ ಕಷ್ಟಸುಖಗಳನ್ನು ಯಾರಿಗೆ ಇಲ್ಲಿ ಹೇಳಿಕೊಳ್ಳಬೇಕು ? ತಮಗೆ ತಾನೇ ಮೊದಲು ತಿಳಿಸಬೇಕು.

ಅಧ್ಯಕ್ಷರು. —ತಾವು ನಿನ್ನೆ ತಾನೇ ನೋಟೀಸು ಕಳುಹಿಸಿದ್ದೀರಿ, ಅದನ್ನು ನೋಡಲು ನನಗೆ ಅವಕಾಶಬೇಡವೇ ? ಅವಕಾಶ ಕೊಡುವುದನ್ನು ಬಿಟ್ಟು ತಾವು ಇಲ್ಲಿ ಏಕಾ ಏಕಿ ಪ್ರಸ್ತಾಪ ಮಾಡಲು ಷರು ಮಾಡಿದರೆ ಹೇಗೆ ?

* * * *

ಶ್ರೀ ಎಸ್. ಬಂಗಾರಪ್ಪ. —ದಯಮಾಡಿ ತಾವು ಇದರ ಬಗ್ಗೆ ಏನು ಮಾಡಬೇಕೋ ಅವನ್ನು ಮಾಡಲು ನನ್ನ ಅಭ್ಯಂತರವಿಲ್ಲ. ನಾನು ರೂಲ್ಸು 146ರ ಪ್ರಕಾರ ಒಂದು ಮೋಷನ್ ಕಳುಹಿಸಿರುವುದರ ಬಗ್ಗೆ ಇಲ್ಲಿ ಹೇಳುತ್ತಿರುವಾಗ ತಾವು ಇಲ್ಲಿ ಎಕ್ಸ್‌ಪಂಜ್ ಮಾಡಬೇಕೆಂದು ಹೇಳಿದರೆ ನಾವೇನು ಹೇಳುವುದು ? ಇದು ನನ್ನ ಪ್ರಕಾರ ನಮಗೆ ಒಂದು ಶಿಕ್ಷೆ ಎಂದಾಗುತ್ತದೆ.

ಅಧ್ಯಕ್ಷರು. —ಮಾನ್ಯ ಸದಸ್ಯರು ಹೀಗೆ ಹೇಳಿದರೆ ಹೇಗೆ ? ನಾನು ನಮ್ಮ ನಿಯಮದಲ್ಲಿರುವ ರೂಲನ್ನು ತಮ್ಮ ಅವಗಾಹನೆಗಾಗಿ ಓದುತ್ತೇನೆ.

> "Rule 149 : The Speaker shall decide whether a motion or a part thereof is or is not admissible under these rules and may disallow any motion or a part thereof when in his opinion it is an abuse of the right of moving a motion or calculated to obstruct or prejudicially affect the procedure of the Assembly or is in contravention of these rules.
>
> "Rule 150· The Speaker may, after considering the state of business in the Assembly and in consultation with the Leader of the House, allot a day or days or part of a day for the discussion of any such motion."

ನಾನು ಇನ್ನೂ ತಮ್ಮ ನೋಟೀಸನ್ನು ನೋಡಿಯೇ ಇಲ್ಲ. ಮೊದಲು ಇದು ಸರಿಯಾಗಿದೆಯೇ ಇಲ್ಲವೇ ಎನ್ನುವುದನ್ನು ನೋಡಬೇಕು. ಆನಂತರ ನಿಮಗೆ ಅನುಮತಿ ಕೊಡಬಹುದೇ ಬೇಡವೇ ಎನ್ನುವುದನ್ನು ವಿಚಾರ ಮಾಡಬೇಕು ಮತ್ತು ಇದಕ್ಕೆಲ್ಲಾ ನಿಯಮಗಳಿವೆ. ಇದನ್ನು ಅನುಸರಿಸದೇ ನಾನೇನು ತಾನೇ ಮಾಡಲು ಸಾಧ್ಯ ? ತಾವು ಏನೇನೋ ಹೇಳುತ್ತಾ ಹೋದರೆ ನಾನೇನು ಮಾಡಬೇಕು ?

***Matter not recorded as ordered by the Chair.

ಶ್ರೀ ಎಸ್. ಬಂಗಾರಪ್ಪ.—ನಾವು ಏನೇನೋ ಹೇಳತಕ್ಕದ್ದಲ್ಲ. ನನ್ನ ಅಭಿಪ್ರಾಯ ತಮ್ಮ ಮುಂದೆ ಇಡುತ್ತಿದ್ದೇವೆ.

* * *

ಅಧ್ಯಕ್ಷರು.—ಹೀಗೆ ಒಟ್ಟಿಗೆ ಹೇಳಿದರೆ ಎಕ್ಸ್‌ಪಂಡ್ ಮಾಡದೆ ಏನು ತಾನೆ ರಿಕಾರ್ಡ್ ಮಾಡಲು ಸಾಧ್ಯ ?

10-00 A. M.

ಶ್ರೀ ಎಸ್. ಬಂಗಾರಪ್ಪ.—ದಯಮಾಡಿ ಅವಕಾಶಮಾಡಿ ಕೊಡಿ. ಎಕ್ಸ್‌ಪಂಜ್ ಮಾಡುತ್ತೇವೆಂದರೆ ನಾವು ಮಾನ್ಯ ಸಭೆಗೆ ಏನು ಹೇಳುವುದಕ್ಕೂ ಬರುವುದಿಲ್ಲ.

ಅಧ್ಯಕ್ಷರು.—ಇಂಥ ಸಂದರ್ಭದಲ್ಲಿ ನನಗೆ ಹೇಗೆ ತಿಳಿದರೆ ಹಾಗೆ ಮಾಡಬೇಕಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾವು ಹೇಳಿದ್ದನ್ನೆಲ್ಲಾ ಎಕ್ಸ್‌ಪಂಜ್ ಮಾಡಿದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ನಾನು ಈ ವಿಷಯವನ್ನು ಏತಕ್ಕೆ ಹೇಳುತ್ತೇನೆಂದರೆ ಇದು ಬಹಳ ಪ್ರಾಮುಖ್ಯವಾದ ವಿಚಾರ. ಬಿಜಾಪುರದ ಭಾಷಣದ ಬಗ್ಗೆ.

Sri D. DEVARAJ URS.—The subject-matter has been disposed of by the Hon. Speaker in the manner just now stated. What is the meaning in again and again discussing it and interfering with the business of the House ?

Sri S. BANGARAPPA.—I am yet to understand this sort of argument advanced from the Treasury bench.

* * * *

ಶ್ರೀ ಕೋಣಂದೂರು ಲಿಂಗಪ್ಪ.—ನನ್ನ ಒಂದು ವಾಕ್ಯವನ್ನು ಹೇಳಿ ವಿರಾಮ ಕೊಟ್ಟಮೇಲೆ ದಯಮಾಡಿ ತಾವು ತಮ್ಮ ಶಬ್ದವನ್ನು ಹೇಳಿ. ಈಗ ನಮಗೆ ಏನಾಗಿದೆ ಎಂದರೆ ಶ್ರೀಮಾನ್ ದೇವರಾಜ ಅರಸ್ ಮತ್ತು ಶ್ರೀಮಾನ್ ದೇವೇಗೌಡರ ಕಾಣಸೂರು ಮತ್ತು ಹೊಳೆನರಸೀಪುರದವರ ಮಾತಿನಲ್ಲಿರುವ ಸತ್ಯಾಸತ್ಯತೆಯನ್ನು ನೋಡಬೇಕಾಗಿದೆ. ಅದರಿಂದ ಸಾರ್ವಜನಿಕರು ಮತ್ತು ನಾವು ವಿವಂಚಿತರಾಗಿದ್ದೇವೆ. ಆದ್ದರಿಂದ ಈ ಸತ್ಯಾಸತ್ಯತೆ ಏನು ಎಂಬುದನ್ನು ತಿಳಿದುಕೊಳ್ಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಮೆರಿಟ್ ಮತ್ತು ಫ್ಯಾ ಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ಕಾಲದಲ್ಲಿ ವಿಷಯಗಳನ್ನು ಹೇಳಲು ಹೋಗುವುದಕ್ಕೆ ಆಗಲಿಲ್ಲ.....

ಅಧ್ಯಕ್ಷರು.—ನನಗೆ ಗೊತ್ತಿದೆ, ತಾವು ಹೇಳುತ್ತಿರುವುದು ಏನು ಎಂದು. ಅದಕ್ಕೋಸ್ಕರವೇ ರಿಕಾರ್ಡ್‌ಮಾಡಬಾರದೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಅಭಿಪ್ರಾಯ ಏನು ಎಂದರೆ ಈ ವಿಷಯದ ಬಗ್ಗೆ ಏನು ಇದೆ ಎನ್ನುವುದನ್ನು ಹೇಳಿಬಿಡಬೇಕಾಗುತ್ತದೆ.

ಅಧ್ಯಕ್ಷರು.—ನನ್ನ ಅನುಮತಿ ಇಲ್ಲದೆ ಹೇಳುವುದಕ್ಕೆ ಬರುವುದಿಲ್ಲ. ಅನುಮತಿ ಕೊಡಬೇಕಾದರೆ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಬಿಜಾಪುರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾಡಿದ ಸಂಪೂರ್ಣ ವಿಷಯವನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಒಂದು ವಿಷಯ ಮಾತ್ರ ಹೇಳುತ್ತೇನೆ. ಅದಕ್ಕೆ ಅವಕಾಶ ಕೊಡದಿದ್ದರೆ ಇದನ್ನು ವಿಚಾರಣೆಗೆ ತೆಗೆದುಕೊಳ್ಳಬೇಕೆಂದು ಹೇಳುವ ಹಕ್ಕು ಸದಸ್ಯರಿಗೆ ಹೊಟ್ಟು ಹೋಗುತ್ತದೆ.

ಅಧ್ಯಕ್ಷರು.—ನನಗೆ ಏನು ಹಕ್ಕು ಇದೆ ಅದನ್ನು ಚಲಾಯಿಸಿದ್ದೇನೆ.

*** Matter not recorded as ordered by the Chair.